### ಇತಿಹಾಸ ಸೇರಿದ ಹಾವುಗೆ

ಈ ಪಾದುಕೆಯ ಅಡಿಭಾಗದಲ್ಲಿ ಒಂದೆರಡು ರಬ್ಬರಿನ ಪದರ. ಪಾದ ಸ್ಪರ್ಶಿಸುವ ಜಾಗದಲ್ಲಿ ಅಡಿಕೆ ಹಾಳೆ ಪದರ. ಅಂಗಳ, ಜಗಲಿಯಲ್ಲಿ ಧರಿಸಲು ಓಕೆ. ಮಳೆಗಾಲದಲ್ಲಿ ಊಹೂಂ. ಅಲ್ಪಸ್ವಲ್ಪ ಒದ್ದೆಯಾದರೆ ಚಿಂತೆಯಿಲ್ಲ. ಗೋಡೆಗೆ ಒರಗಿಸಿಟ್ಟರೆ ಸಾಕು, ಒಣಗುತ್ತದೆ. ನೀರಿನಲ್ಲಿ ಮುಳುಗಿದರೆ? ಪಾದುಕೆಯ ಚಿಂತೆಯನ್ನೇ ಬಿಟ್ಟುಬಿಡಬಹುದು! ಇದು ಕೇರಳದ ತ್ರಿಶೂರಿನ ಕೆ.ಎ. ಜೋಸೆಫ್ ಅವರ 'ಮಲ್ಟಿಕೇರ್' ಸಂಸ್ಥೆಯ ಉತ್ಪನ್ನ.

ಒಳಾಂಗಣಕ್ಕೆ ಹಾಳೆ ಚಪ್ಪಲಿ ಸುರಕ್ಷಿತವಾಗಿತ್ತು. ಹಿಂಗಾಲು ಒಡೆತ, ಅಲರ್ಜಿ, ಆಣಿ ಇರುವವರಿಗೆ ಪ್ರಿಯ. ತಂಪು ಕೋಣೆಯಲ್ಲಿ ವಾಸ ಮಾಡುವವರೂ ಇಷ್ಟಪಟ್ಟಿದ್ದರು. ಕೇರಳದಲ್ಲಿರುವ ಆಯುರ್ವೇದ ವೈದ್ಯಶಾಲೆಗಳ ಚಿಕಿತ್ಸಾ ಕೊಠಡಿಗಳಲ್ಲಿ ಎಣ್ಣೆಪಸೆ ಜಾಸ್ತಿ. ಅಂತಹ ಜಾಗದಲ್ಲಿ ಚಪ್ಪಲಿ ಒಲವು ಪಡೆದಿತ್ತು.

ಅಂತೆಯೇ, ಕೊಯಮತ್ತೂರಿನ 'ಇಕೊಗ್ರೀನ್' ಸಂಸ್ಥೆಯು 'ಬಳಸಿ ಬಿಸಾಡಬಹುದಾದ' ಹಾಳೆ ಚಪ್ಪಲಿಗಳನ್ನು ತಯಾರಿಸುತ್ತಿತ್ತು. ಫೈವ್‌ಸ್ಟಾರ್ ಹೋಟೆಲುಗಳ ಗಿರಾಕಿಗಳಿಗೆ ಪ್ರಿಯ. ಚಪ್ಪಲಿಯ ಕೆಳಭಾಗ ಹಾಳೆ. ಮೇಲಿನ ಭಾಗ ಸೆಣಬು. ಗೋವಾ, ಮುಂಬೈ, ಪಾಂಡಿಚೇರಿ, ಕೊಡೈಕೆನಾಲ್ – ಇಲ್ಲಿನ ರೆಸಾರ್ಟ್‌ನಲ್ಲಿ ಇಕೋಗ್ರೀನ್ ನಿರ್ಮಿತ ಚಪ್ಪಲಿಗಳಿಗೆ ಗ್ರಾಹಕರಿದ್ದರು. ಒಂದು ಬೇಸರವೆಂದರೆ, ಅನ್ಯ ಕಾರಣಗಳಿಂದ ನಿಭಾವಣೆ ಕಷ್ಟವಾಗಿ ಮೇಲಿನೆರಡು ಉದ್ದಿಮೆಗಳು ಶಟರ್ ಎಳೆದಿವೆ.



ಬಡ್ತಿ ಪಡೆಯಿತು. ಹದಗೊಂಡ ಹಾಳೆಯಿಂದ ಅಲಂಕಾರಿಕ ಪಾದರಕ್ಷೆ, ಡೈರಿ, ಹೆಗಲುಚೀಲ, ದಿನಚರಿ ಪುಸ್ತಕದ ಹೊದಿಕೆ ತಯಾರು ಮಾಡಲು ಆರಂಭಿಸಿದ್ದರು. "ಆ ಹೊತ್ತಲ್ಲೇ ಕೋವಿಡ್ ಬಂದೆರಗಿತು. ವಿದೇಶಿ ಮಾರುಕಟ್ಟೆ ಸ್ತಬ್ಧವಾಯಿತು. ಮುಂದೇನು ಎನ್ನುವುದು ಉದ್ದಿಮೆ ಉಳಿವಿನ ಪ್ರಶ್ನೆಯಾಗಿತ್ತು" ಎಂದು ಸುರೇಶ್ ಅವರು ಕೋವಿಡ್ ಕಾಲಘಟ್ಟವನ್ನು ನೆನಪಿಸಿಕೊಂಡರು.

ರಾಜಸ್ಥಾನದ ಜೈಪುರದಲ್ಲಿರುವ 'ನ್ಯಾಶನಲ್ ಇನ್‌ಸ್ಟಿಟ್ಯೂಟ್ ಫಾರ್ ಅಗ್ರಿ ಮ್ಯಾನೇಜ್‌ಮೆಂಟ್' ಇವರಿಂದ ಉದ್ದಿಮೆಯನ್ನು ಸಶಕ್ತಗೊಳಿಸಲು ಆನ್‌ಲೈನ್ ತರಬೇತಿ ಪಡೆದುಕೊಂಡರು. ಇದೇ ಸಂಸ್ಥೆಯಿಂದ 'ಕೃಷಿ ಸ್ಟಾರ್ಟಪ್'ಗಳಿಗೆ ವಿಶೇಷ ಅನುದಾನ ಪಡೆದರು. ಉದ್ದಿಮೆಗೆ ಬೇಕಾದ ಆರ್ಥಿಕ ಅಡಿಗಟ್ಟು ಸಿದ್ಧವಾಯಿತು.

"ಶಿವಮೊಗ್ಗ ನಗರದ ಹೊರವಲಯದಲ್ಲಿರುವ ಗೋದಾಮಿನಲ್ಲಿ ಹಾಳೆಗಳನ್ನು ಸಂಗ್ರಹಿಸಿಡುತ್ತೇವೆ. ಅಲ್ಲಿ ಹಾಳೆಯನ್ನು 'ಚರ್ಮ'ವಾಗಿಸುವ ಪ್ರಕ್ರಿಯೆ ನಡೆಯುತ್ತದೆ. ಬಳಿಕ ನಗರದ ಕಲ್ಲಹಳ್ಳಿಯಲ್ಲಿರುವ ಕಚೇರಿಯಲ್ಲಿ ಹೊಲಿಗೆ ಮೊದಲಾದ ಕೆಲಸಗಳು ನಡೆಯುತ್ತವೆ. ಅಲ್ಲಿನ ಪೂರ್ತಿ ಜವಾಬ್ದಾರಿ ಮೈಥಿಲಿಯವರದ್ದು" ಎಂದು ತಮ್ಮ ಉದ್ದಿಮೆಯ ಸ್ವರೂಪವನ್ನು ಮುಂದಿಡುತ್ತಾರೆ ಸುರೇಶ್.

"ಅಡಿಕೆ ಹಾಳೆಗಳನ್ನು ಸ್ಥಳೀಯವಾಗಿ ಸಂಗ್ರಹಿಸುತ್ತೇವೆ. ಹಾಳೆಗಳ ಮೇಲ್ಭಾಗ ಬಿಳಿ ವರ್ಣ ಕಳೆದುಕೊಂಡಿರಬಾರದು. ಶೇಡ್ ತರಹ ಇರಕೂಡದು. ಬೆಂಡ್ ಇದ್ದರೆ ಪ್ರಾಸೆಸ್ ಹಂತದಲ್ಲಿ ಮುರಿದುಹೋಗುತ್ತದೆ" ಎಂದು ಹಾಳೆ ಸಂಗ್ರಹದ ಸೂಕ್ಷ್ಮಗಳನ್ನು ಬಿಡಿಸಿ ಹೇಳುತ್ತಾರೆ.

### ವಿದೇಶದಲ್ಲಿ ಒಲವು

ಇವರು ತಯಾರಿಸಿದ ಪಾದರಕ್ಷೆ, ಪೆನ್ ಸ್ಟ್ಯಾಂಡ್, ಮಹಿಳೆಯರ ಕೈ ಪರ್ಸು, ಹ್ಯಾಂಡ್ ಬ್ಯಾಗ್, ತೂಗುದೀಪ, ಡೈರಿ, ಇತ್ಯಾದಿ ಉತ್ಪನ್ನಗಳು ವಿನ್ಯಾಸಗಳ ನೋಟದ ಅಂದದಿಂದ ಕಣ್ಣು ದಣಿಯುತ್ತದೆ! ದೆಹಲಿ, ಮೈಸೂರಿನಲ್ಲಿ ಜರುಗಿದ ಸಮ್ಮೇಳನಗಳಲ್ಲಿ ಸುರೇಶ್ ಮಳಿಗೆ ತೆರೆದಿದ್ದರು. "ಕಾರ್ಪೊರೇಟ್ ವಲಯದ ಮಂದಿಗೆ ಡೈರಿ ಇಷ್ಟವಾದರೆ, ಹೆಣ್ಮಕ್ಕಳಿಗೆ ಪರ್ಸು ಮುದ ನೀಡುತ್ತದೆ. ವಿದೇಶದಲ್ಲಿ ಹ್ಯಾಂಡ್‌ಬ್ಯಾಗ್, ಪಾದರಕ್ಷೆಗಳಿಗೆ ಬೇಡಿಕೆ ಹೆಚ್ಚು. ನಮ್ಮಲ್ಲಿ ಅಡಿಕೆ ಹಾಳೆಯ ಉತ್ಪನ್ನವೆಂದಾಗ ತುಂಬಾ ಜನ ಆಸಕ್ತಿ ತೋರುತ್ತಿದ್ದಾರೆ" ಎಂದು ಹೇಳುತ್ತಾರೆ.

ಅಡಿಕೆ ಹಾಳೆಗಳನ್ನು ಥಿನ್ನಿಂಗ್‌ಗೊಳಿಸುವ ಕೆಲಸಗಳಿಗೆ ಈಗ ತಮಿಳುನಾಡಿಗೆ ಒಯ್ಯಬೇಕಾಗಿಲ್ಲ. ಇದಕ್ಕಾಗಿ ಯಂತ್ರ ಖರೀದಿಸಿದ್ದಾರೆ. ಹದಗೊಳಿಸಿದ ಹಾಳೆಗಳಿಗೆ ನೆದರ್‌ಲ್ಯಾಂಡ್‌ನಲ್ಲಿ ಬೇಡಿಕೆಯಿದೆ. ಪ್ರತಿ ಹಾಳೆಯು 17 ಇಂಚು ಉದ್ದ, 14 ಇಂಚು ಅಗಲ. ಇಂತಹ ಸಾವಿರಗಟ್ಟಲೆ ಹಾಳೆಗಳು ಕಡಲಾಚೆ ಹಾರುತ್ತವೆ. ನೆದರ್‌ಲ್ಯಾಂಡಿನಲ್ಲಿ ಇದರಿಂದ ಹ್ಯಾಂಡ್‌ಬ್ಯಾಗ್, ನೆಲ ಹಾಸು, ಪಾದರಕ್ಷೆಗಳು ತಯಾರಾಗುತ್ತವೆ.

ನೆಲಹಾಸಿಗೆ ದರ ಜಾಸ್ತಿ. ಚದರ ಮೀಟರಿಗೆ 9000 ರೂಪಾಯಿ! ಆಶ್ಚರ್ಯವಾಯಿತೇ? ಇದು ಯಂತ್ರದ ತಯಾರಿ ಅಲ್ಲ. ಮಾನವ ಶ್ರಮದಿಂದಲೇ ರೂಪುಗೊಳ್ಳಬೇಕು. ಎರಡು ವರುಷ ಬಾಳ್ವಿಕೆ. "ಶ್ರಮದ ಅರಿವಿದ್ದವರು ಚರ್ಚೆ ಮಾಡುವುದಿಲ್ಲ" ಎನ್ನುತ್ತಾರೆ ಸುರೇಶ್.

ಪಾದರಕ್ಷೆಗಳ ಪಟ್ಟಿಗೆ (ಸ್ಟ್ರಾಪಿಗೆ) ಖಾದಿ ಬಟ್ಟೆ ಬಳಕೆ ಮಾಡುತ್ತಾರೆ. ನೈಸರ್ಗಿಕ ಬಣ್ಣದ ಖಾದಿ ಬಟ್ಟೆಯನ್ನು ಹೆಗ್ಗೋಡಿನ 'ಚರಕ' ಸಂಸ್ಥೆಯಿಂದ ತರಿಸಿಕೊಳ್ಳುತ್ತಾರೆ. ಸ್ಯಾಂಡಲ್ಸ್ ಬೆಲೆ 300 ರೂ. ಹ್ಯಾಂಡ್‌ಬ್ಯಾಗಿಗೆ 250, ಪೆನ್ ಸ್ಟಾಂಡಿಗೆ 125 ರೂಪಾಯಿ. ತೂಗುದೀಪಕ್ಕೆ ಬಲ್ಬ್, ಹೋಲ್ಡರ್ ಸೇರಿ 650 ರೂಪಾಯಿ.

"ಡೈರಿಗೆ ಹಾಳೆ ಹೊಸೆದುದಕ್ಕೆ 250ರೂ. ಅಪೇಕ್ಷೆಪಟ್ಟರೆ ಸಂಸ್ಥೆಗಳ ಲೋಗೊ, ವಿಳಾಸ ಮುದ್ರಿಸಿಕೊಡುವ ವ್ಯವಸ್ಥೆಯಿದೆ. ಅಂತೆಯೇ ಪಾದರಕ್ಷೆಯನ್ನು ಗ್ರಾಹಕರ ಅಪೇಕ್ಷೆಯಂತೆ ವಿನ್ಯಾಸ ಮಾಡುತ್ತೇವೆ" ಎಂದು ಹೇಳುತ್ತೇವೆ. ಸುರೇಶರ ಈ ಪರಿಸರಸ್ನೇಹಿ ಉತ್ಪನ್ನಗಳಲ್ಲಿ ಪ್ರಾಣಿಗಳ ಚರ್ಮಗಳ ಬಳಕೆಯಿಲ್ಲ. ರಾಸಾಯನಿಕಗಳ ಸೋಂಕಿಲ್ಲ. ನೀರು, ಗಾಳಿ, ಮಣ್ಣು ಕಲುಷಿತವಾಗುವ ಭಯವಿಲ್ಲ. ಎಲ್ಲವೂ ಪರಿಸರಸ್ನೇಹಿ.

ನಮ್ಮ ಅಡಿಕೆ ತೋಟದ ಹಾಳೆಯು ವಿವಿಧ ಉತ್ಪನ್ನಗಳಾಗಿ ವಿದೇಶ ಸೇರುವುದು ನಿಜಕ್ಕೂ ಸಂತೋಷ. ಆದರೆ ಈ ಉತ್ಪನ್ನಗಳನ್ನು ನಮ್ಮಲ್ಲೇ ಬಳಸುವಂತಾದರೆ ಕೃಷಿಗೆ, ಕೃಷಿಕರಿಗೆ ಗೌರವ ನೀಡಿದಂತಾಗುವುದಿಲ್ವೇ? ಅಡಿಕೆ ಸಂಸ್ಥೆಗಳು 'ಭೂಮಿ ಅಗ್ರಿ ವೆಂಚರ್ಸ್'ನತ್ತ (9448203888) ಯಾಕೆ ಕತ್ತು ಹೊರಳಿಸಬಾರದು? ಅಡಿಕೆ ಕುರಿತಾದ ಮಾತುಕತೆಗಳಲ್ಲಿ ಅಡಿಕೆ ಹಾಳೆಯ ಉತ್ಪನ್ನಗಳೂ ಸೇರಲಿ.

ಪ್ರತಿಕ್ರಿಯಿಸಿ: feedback@sudha.co.in





ಸುರೇಶ್ ಮೈಥಿಲಿ ದಂಪತಿ